ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhat Bengaluru Mahanagara Palike

ಅಧೀಕ್ಷಕ ಅಭಿಯಂತರರು (ದಾಸರಹಳ್ಳಿ) ರವರ ಕಛೇರಿ,
ಎಂ.ಇ.ಐ ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು-560073.

ಸಂಖ್ಯೆ: ಅ.ಅ.(ದಾ)/ತಾ.ಮ./ 01 /2020-21 ದಿನಾಂಕ: 04/04/2020

"ತಾಂತ್ರಿಕ ಮಂಜೂರಾತಿ ಪತ್ರ"

ವಿಷಯ :- Improvements of CC Roads, drais and other Works at Gowdike Hoola (Jodidar Narasimhaiah Layout) in Ward No.14 ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :- ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗ ರವರ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ: ಕಾ.ಪಾ.ಅ.(ದಾ.ವಿ)/ಆ.ಮ/ 01/2020-21, ದಿನಾಂಕ:04/04/2020.

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು **ರೂ.100.00 ಲಕ್ಷಗಳ** ಮೊತ್ತಕ್ಕೆ ತಯಾರಿಸಿ, ಉಲ್ಲೇಖ (1)ರಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ತಾಂತ್ರಿಕ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸದರಿ Improvements of CC Roads, drais and other Works at Gowdike Hoola (Jodidar Narasimhaiah Layout) in Ward No.14 ರ ಕಾಮಗಾರಿಯ ಅಂದಾಜು ಮೊತ್ತ **ರೂ.100.00 ಲಕ್ಷಗಳ** ಮೊತ್ತಕ್ಕೆ 2019-20ನೇ ಸಾಲಿನ ಆಯವ್ಯಯದ ಪಿ-1878 Bhagyajyothi, Sooru/ Neeru Yojane and General) ರಲ್ಲಿ ಮೀಸಲಿಟ್ಟಿರುವ ಅನುದಾನದಡಿಯಲ್ಲಿ ಜಾಬ್ ಸಂಖ್ಯೆ 014-20-000112ರಲ್ಲಿ ನೀಡಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗೆ ಈ ಕಛೇರಿಯ ತಾಂತ್ರಿಕ ಮಂಜೂರಾತಿ ದಾಖಲಾತಿಯ ವಹಿಯ **ಕ್ರಮ ಸಂಖ್ಯೆ.01**, ಮತ್ತು **ಪುಟ ಸಂಖ್ಯೆ:17** ರಲ್ಲಿ ನೊಂದಾಯಿಸಿ **ರೂ.100.00 ಲಕ್ಷಗಳಿಗೆ** ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

ಷರತ್ತುಗಳು :-

1. ಈ ಹಿಂದೆ ತಾಂತ್ರಿಕ ಮಂಜೂರಾತಿ ಅನುಮೋದನೆ ನೀಡಲಾದ ಅಂದಾಜುಗಳಲ್ಲಿನ ಬಾಬ್ತುಗಳು ಮತ್ತು ಬಾಬ್ತುಗಳ ಪರಿಮಾಣಗಳು ಈ ಅಂದಾಜುಗಳಲ್ಲಿ ಮರುಕಳಿದಿರುವುದಕ್ಕೆ ಪರಿಶೀಲಿಸಿ, ದೃಢೀಕರಿಸಿಕೊಂಡ ನಂತರವೇ ಈ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ಪ್ರಕಾರ ಕಾಮಗಾರಿಯ ಟೆಂಡರ್ ಕರೆಯುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.
3. ಅಂದಾಜುಪಟ್ಟಿಯ ಮೊತ್ತವು ಮಂಜೂರಾತಿಯಾದ ಮೊತ್ತಕ್ಕಿಂತ ಮೀರಬಾರದು, ಹಾಗೂ ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
4. ಕಾಮಗಾರಿಯನ್ನು ಐ.ಆರ್.ಸಿ/ಐ.ಎಸ್. ಮಾರ್ಗ ಸೂಚಿಗಳಂತೆ, ಮತ್ತು ನಿಗಧಿತ ವಿಶಿಷ್ಟ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
5. ಕಾಮಗಾರಿ ಪೂರ್ಣಗೊಂಡ ನಂತರ ನಿಗಧಿತ ಅವಧಿಯೊಳಗೆ ಯುಟಿಲೈಜೇಷನ್ ಪ್ರಮಾಣ ಪತ್ರ ಹಾಗೂ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

Scanned with CamScanner

6. ಮಂಜೂರಾದ ಕಾಮಗಾರಿಯಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡು ಆಗಿದ್ದಲ್ಲಿ ಅನುಷ್ಠಾನ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.
7. ತಳಪಾಯದ ವಿನ್ಯಾಸವನ್ನು ಸಿದ್ದಗೊಳಿಸಿ ಕೆಲಸ ಆರಂಭಿಸುವ ಮುನ್ನ ಈ ಕಛೇರಿಯ ಒಪ್ಪಿಗೆಯನ್ನು ಪಡೆಯತಕ್ಕದ್ದು.
8. ಸದರಿ ಕಾಮಗಾರಿಗೆ ನೀಡಲಾದ ನಿವೇಶನದ ಲಭ್ಯತೆ ಬಗ್ಗೆ ಟೆಂಡರ್ ಕರಾರು ಮಾಡುವ ಮುನ್ನ ಧೃಡೀಕರಿಸಿ ಕೊಳ್ಳ ತಕ್ಕದ್ದು.
9. ನಿಗದಿಯಾದ ದರಪಟ್ಟಿಯಲ್ಲಿಲ್ಲದ ದರಗಳಿಗೆ (Data Rate) ಮತ್ತು ದರಗಳ ವಿವರಗಳಿಗೆ (Rate Analysis) ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯ ತಕ್ಕದ್ದು.
10. ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಇಡಗಂಟು ರೂಪದಲ್ಲಿ ಒದಗಿಸಲಾಗಿರುವ (LumpSum Provisions) ಮೊತ್ತಗಳಿಗೆ ಉಪಅಂದಾಜನ್ನು ತಯಾರಿಸಿ ಅನುಮೋದನೆ ಪಡೆಯ ತಕ್ಕದ್ದು.
11. ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸುವಾಗ Stander Tender Document KW - 1/2/3/4 ಹಾಗೂ ಆಗಿಂದಾಗ್ಗೆ ಹೊರಡಿಸುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.
12. ತೆರವುಗೊಳಿಸಿರುವ ಉಪಯುಕ್ತ ಸಾಮಾಗ್ರಿಗಳ ಬಗ್ಗೆ **MAS** ನ ವಹಿಯಲ್ಲಿ ದಾಖಲಿಸುವುದು ಹಾಗೂ ಈ ತರಹದ ಉಪಯುಕ್ತ ಸಾಮಾಗ್ರಿಗಳನ್ನು ಬೇರೆಡೆ ಉಪಯೋಗಿಸಿರುವ (ಮರು ಬಳಿಕೆ ಮಾಡಿರುವ) ಬಗ್ಗೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ದೃಢೀಕರಿಸಿಕೊಳ್ಳುವುದು.
13. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಮಾನ್ಯ ಆಯುಕ್ತರವರ ದಿನಾಂಕ:02/11/2017ರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಆ./ಪಿ.ಆರ್/5054/2017–18 ರಂತೆ ಕ್ರಮವಹಿಸುವುದು.

ಅಧೀಕ್ಷಕ ಅಭಿಯಂತರರು
ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರಪಾಲಿಕೆ

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಮುಖ್ಯ ಲೆಕ್ಕಾಧಿಕಾರಿಯವರ ಗಮನಕ್ಕೆ ಕಳುಹಿಸಿದೆ.
3. ಕಛೇರಿ ಕಡತಕ್ಕೆ.

Scanned with CamScanner